

# ಸತೋಪಂತ್

## ಹಿಮಶಿಖರಗಳ ನಡುವಿನ ನೀರ ತೊಟ್ಟಿಲು

ಪುರಾಣ ಕಥೆಯೊಂದಿಗೆ ಬೆಸೆದುಕೊಂಡಿರುವ ಉತ್ತರಾಖಂಡದ ಸತೋಪಂತ್ ಸರೋವರ, ಪ್ರಕೃತಿಪ್ರೇಮಿಗಳಿಗೆ ಸ್ವರ್ಗಾನುಭವದ ತಾಣ. ಹಿಮಾವೃತ ಶಿಖರಗಳು, ಗಿರಿಕಂದರಗಳ ಆಳ ಎತ್ತರಗಳು, ಹಿಮಕರಗಿ ನದಿಯಾಗುವ ಸೌಂದರ್ಯ ಸವಿಯುತ್ತಾ ಹೊರಡುವ ಚಾರಣ, ಎದೆ ಝುಲ್ಲೆನ್ನಿಸುವ ಕ್ಷಣಗಳಿಗೂ ಸಾಕ್ಷಿಯಾಗುತ್ತದೆ.

■ **ರವಿಶಂಕರ್ ಎಸ್.ಎಲ್.**

ಹಿಮಾಲಯ ಎಂದರೆ ಹಾಗೇ, ಒಮ್ಮೆ ಹೋಗಿಬಂದರೆ ಆಯಿತು, ಅದರ ಆಕರ್ಷಣೆ ತೀರುವಂಥದ್ದಲ್ಲ. ಮತ್ತೆ ಮತ್ತೆ ಹಿಮ ತುಂಬಿದ ಗಿರಿಶಿಖರಗಳನ್ನು ಕಣ್ತುಂಬಿಕೊಳ್ಳುವ ಆಸೆ ಹೆಚ್ಚಾಗುತ್ತಲೇ ಇರುತ್ತದೆ. ಅಗಾಧ ಹಿಮಚ್ಛಾದಿತ ಶಿಖರಗಳ ನಡುವೆ ಧಾತುವಾಗಿ, ದಿಗಿಲು ಹುಟ್ಟಿಸುವ ಆಳ ಎತ್ತರಗಳನ್ನು ನೋಡುವುದು, ಜುಳುಜುಳು ಹರಿವ ಸ್ಫಟಿಕದಂಥ ನೀರಿನ ರಭಸದ ನದಿಗಳ ಚೆಲ್ಲಾಟ ನೋಡುವುದು, ಹಚ್ಚ ಹಸುರಿನ ಕಾಡುಗಳ ಮಧ್ಯೆ ಅನಾಮಿಕರಾಗಿ ಅಲೆಯುವುದು, ಮಾನವನಾಗಿ ಹುಟ್ಟಿದ್ದಕ್ಕೆ ಒಂದು ಧನ್ಯತಾಭಾವ ಆವರಿಸಿ ಹೃದಯ ತುಂಬಿಬರುವುದು.

ಈ ಬಾರಿಯ ನಮ್ಮ ತಂಡದ ಚಾರಣವನ್ನು, ಉತ್ತರಾಖಂಡ ರಾಜ್ಯದ ಚಮೋಲಿ ಜಿಲ್ಲೆಯ, ಬದರೀನಾಥ ಕ್ಷೇತ್ರದಿಂದ ಸುಮಾರು 25 ಕಿ.ಮೀ. ದೂರದ ಸತೋಪಂತ್ ಸರೋವರ ದರ್ಶನಕ್ಕೆಂದು ನಿರ್ಧರಿಸಲಾಯಿತು. ಸತೋಪಂತ್ ಪರ್ವತ, ಹಿಮಾಲಯದ ಘರವಾಲ್ ಶ್ರೇಣಿಗಳಲ್ಲಿ ಎರಡನೇ ಎತ್ತರದ ಪರ್ವತವಾಗಿದ್ದು, ಗಂಗೋತ್ರಿ ರಾಷ್ಟ್ರೀಯ ಉದ್ಯಾನಕ್ಕೆ ಸೇರುತ್ತದೆ. ದೆಹಲಿ, ಹರಿದ್ವಾರದ ಮೂಲಕ ಬದರೀನಾಥ ತಲುಪಿ, ನಂತರ ಸತೋಪಂತ್ ಚಾರಣ ಮಾಡುವುದೆಂದು ಯೋಜನೆಯಾಯಿತು.

ಸತೋಪಂತ್ ಸರೋವರಕ್ಕೆ ಎರಡು ಪೌರಾಣಿಕ ಕಥೆಗಳಿವೆ. ಮೊದಲನೆಯದು, ಈ ಸರೋವರಕ್ಕೆ ಬ್ರಹ್ಮ, ವಿಷ್ಣು, ಮಹೇಶ್ವರರು ಸ್ನಾನ ಮಾಡಲು ಏಕಾದಶಿ ದಿನಗಳಲ್ಲಿ ಬರುವರೆಂದು, ಇಲ್ಲಿ ಮಾನವರು ಮುಳುಗೆದ್ದರೆ ಅವರ ಪಾಪಗಳಿಗೆ ಪರಿಹಾರ ದೊರಕುವುದೆಂಬ ನಂಬಿಕೆಯಿದೆ. ಎರಡನೆಯದು, ಮಹಾಭಾರತದ ಕೊನೆಯಲ್ಲಿ